# ಎನ್ಐಟಿಕೆ: ಅಂತಾರಾಷ್ಟ್ರೀಯ ಸಮ್ಮೇಳನ



**ಸುರತ್ಕಲ್, ಮೇ 1:** ನ್ಯಾಶನಲ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಕರ್ನಾಟಕ ಸುರತ್ಕಲ್‌ನ ಸಿವಿಲ್ ಎಂಜಿನಿಯರಿಂಗ್ ವಿಭಾಗವು 'ಸುಸ್ಥಿರ ಮೂಲಸೌಕರ್ಯ: ನಾವೀನ್ಯತೆಗಳು, ಅವಕಾಶಗಳು ಮತ್ತು ಸವಾಲುಗಳು ಕುರಿತು 2 ದಿನಗಳ ಅಂತಾರಾಷ್ಟ್ರೀಯ ಸಮ್ಮೇಳನವನ್ನು ಎನ್ಐಟಿಕೆಯಲ್ಲಿ ಆಯೋಜಿಸಿತ್ತು.

300ಕ್ಕೂ ಹೆಚ್ಚು ಮಂದಿ ಸಮ್ಮೇಳನದಲ್ಲಿ ಪಾಲ್ಗೊಂಡು ಪ್ರಬಂಧಗಳನ್ನು ಪ್ರಸ್ತುತಪಡಿಸಿದರು. ಸಿವಿಲ್ ಎಂಜಿನಿಯರಿಂಗ್ ಕ್ಷೇತ್ರಕ್ಕೆ ನೀಡಿದ ಮಹತ್ವದ ಕೊಡುಗೆಗಾಗಿ ಎನ್ಐಟಿಕೆ ಸುರತ್ಕಲ್‌ನ ಸಿವಿಲ್ ಎಂಜಿನಿಯರಿಂಗ್ ವಿಭಾಗದ ಹಿರಿಯ ಪ್ರಾಧ್ಯಾಪಕ ಪ್ರೊ| ಕಟ್ಟಾ ವೆಂಕಟರಮಣ ಅವರನ್ನು ಗಣ್ಯರು ಸಮ್ಮಾನಿಸಿದರು.

ಉದ್ಘಾಟನ ಸಮಾರಂಭದಲ್ಲಿ ಹೊಸದಿಲ್ಲಿಯ ಎಐಸಿಟಿಇ ಅಧ್ಯಕ್ಷ ಪ್ರೊ| ಟಿ.ಜಿ. ಸೀತಾರಾಮ್ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು. ಸಿಂಗಾಪುರದ ರಾಷ್ಟ್ರೀಯ ವಿ.ವಿ. (ಎನ್ ಯುಎಸ್) ಸಹಾಯಕ ಪ್ರಾಧ್ಯಾಪಕ ಪ್ರೊಫೆಸರ್ ಡರೆನ್ ಚೈನ್ ಸಿಯಾವ್ ಚೆನ್ ಗೌರವ ಅತಿಥಿಯಾಗಿದ್ದರು. ನಿರ್ದೇಶಕ ಪ್ರೊ| ಬಿ. ರವಿ, ಎನ್ಐಟಿಕೆ ಸಿವಿಲ್ ವಿಭಾಗದ ಮುಖ್ಯಸ್ಥ ಪ್ರೊ| ಸುಭಾಷ್ ಸಿ. ಯರಗಲ್ ಅಧ್ಯಕ್ಷತೆ ವಹಿಸಿದ್ದರು.

ವಿವಿಧ ವಿಚಾರಗಳಿಗೆ ಆದ್ಯತೆ ನೀಡಿ ಸಮ್ಮೇಳನದಲ್ಲಿ ಚರ್ಚೆ ನಡೆಸಲಾಯಿತು. ಸುರತ್ಕಲ್ ಎನ್ ಐಟಿಕೆ ಸಿವಿಲ್ ಎಂಜಿನಿಯರಿಂಗ್ ವಿಭಾಗದ ಡಾ| ರವಿರಾಜ್ ಎಚ್.ಎಂ., ಡಾ| ಶ್ರೀವಲ್ಲ ಕೊಳತ್ತಾಯರ್, ಡಾ| ಪವನ್ ಅವರು ಎಸ್ ಐಒಸಿ-2024ರ ಸಂಘಟನ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದರು.

Udayavani, Date:02/05/24, p, no - 02